3. ವಿಷಯ : ಕೃಷಿ ಮಾಡಿಕೊಂಡಿರುವ ರೈತರ ಜಮೀನಿನಲ್ಲಿ ಜಲ್ಲಿ ಕ್ರಷರ್‌ಗಳಿಗೆ ಅನುಮತಿ ನೀಡಿರುವ ಬಗ್ಗೆ

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ತಾಲ್ಲೂಕಿನ ನಾಗನಹಳ್ಳಿ ಎಂಬ ಗ್ರಾಮದಲ್ಲಿ ಸರ್ವೆ ನಂಬರ್ 167ರಲ್ಲಿ ಸರ್ಕಾರಿ ಗೋಮಾಳದಲ್ಲಿ ಸುಮಾರು 30 ಎಕರೆ ಪ್ರದೇಶದಲ್ಲಿ ಹೊಸದಾಗಿ 14 ಜಲ್ಲಿ ಕ್ರಷರ್‌ಗಳನ್ನು ಆರಂಭಿಸಲು ಸರ್ಕಾರ ಅನುಮತಿ ಕೊಟ್ಟಿದೆ. ಇದರಿಂದ ಅಲ್ಲಿರುವಂತಹ ರೈತರಿಗೆ ಬಹಳ ತೊಂದರೆಯಾಗಿದೆ. ಏಕೆಂದರೆ ಫಾರಂ–50 ಮತ್ತು 53ರಲ್ಲಿ ಹತ್ತಾರು ವರ್ಷದಿಂದ ಅರ್ಜಿ ಹಾಕಿಕೊಂಡು ಕಂದಾಯ ಮತ್ತು ಅರಣ್ಯ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದಾರೆ. ಅದನ್ನು ಕಡೆಗಣಿಸಿ ಅಲ್ಲಿ ಜಲ್ಲಿ ಕ್ರಷರ್‌ಗಳನ್ನು ಕೊಟ್ಟಿದ್ದಾರೆ. ರೈತರು ನಿರಂತರವಾಗಿ ಮೂರು ತಿಂಗಳಿನಿಂದ ಹೋರಾಟ ಮಾಡುತ್ತಿದ್ದಾರೆ. ಈಗ ಬಗರ್ ಹುಕುಂ ಕಮಿಟಿ ಮಾಡಿದ್ದೀರಿ. ಆ ಕಮಿಟಿಯಲ್ಲಿ ಕುಳಿತು ಈ ವಿಷಯವನ್ನು ಇತ್ಯರ್ಥ ಮಾಡುವವರೆಗೆ ಅದನ್ನು ಸ್ಥಗಿತಗೊಳಿಸಬೇಕು, ಇಲ್ಲವೆಂದರೆ ಅಲ್ಲಿ ಕೊಟ್ಟಿರುವಂತಹ ಅನುಮತಿಯನ್ನು ಹಿಂಪಡೆಯಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಅವರು ಶೂನ್ಯವೇಳೆಯ ಪ್ರಸ್ತಾಪವನ್ನು ಲಿಖಿತವಾಗಿ ಕೊಟ್ಟಿಲ್ಲ, ಈ ವಿಷಯವನ್ನು ಈಗ ಎತ್ತಿದ್ದಾರೆ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ನಾನು ಸೋಮವಾರ ಲಿಖಿತವಾಗಿ ಕೊಟ್ಟಿದ್ದೇನೆ.

ಅಧ್ಯಕ್ಷರು : ನಮಗೆ ಕೊಟ್ಟಿದ್ದೀರಾ ?

ಶ್ರೀ ಬಿ.ಬಿ. ನಿಂಗಯ್ಯ : ಕೊಟ್ಟಿದ್ದೇನೆ.

ಶ್ರೀ ಬಿ.ಬಿ. ನಿಂಗಯ್ಯ : ನಾನು ಮತ್ತು ರವಿಯವರು ಇಬ್ಬರೂ ಸಹಿ ಮಾಡಿದ್ದೇವೆ.

ಅಧ್ಯಕ್ಷರು : ಕಳೆದ ವಾರ ಕೊಟ್ಟಿರುವುದು ಅಲ್ಲವೇ ?

ಶ್ರೀ ಬಿ.ಬಿ. ನಿಂಗಯ್ಯ : ಹೌದು, ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ವಿಚಾರವಿದ್ದು, ಕಳೆದ ವಾರ ಕೊಟ್ಟಿರುವುದು. ಅಲ್ಲಿ ನಿರಂತರವಾಗಿ strike ಮಾಡುತ್ತಿದ್ದಾರೆ.

ಅಧ್ಯಕ್ಷರು : ಉತ್ತರ ಇಲ್ಲ, ಉತ್ತರ ತಯಾರಾಗಿ ಬರಬೇಕಲ್ಲ. ನಾಳೆ ತಯಾರಾಗಿ ಬನ್ನಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾಳೆ ಉತ್ತರವನ್ನು ಕೊಡಿಸುತ್ತೇನೆ.